# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯದರ್ಶಿ, ವಾರ್ಡ್ ಸಮಿತಿ /ಸಹಾಯಕ ಇಂಜಿನಿಯರ್‌ರವರ ಕಛೇರಿ, ಶಂಕರಮಠ ವಾರ್ಡ್ ಸಂಖ್ಯೆ: 75.
15ನೇ ಮುಖ್ಯರಸ್ತೆ, 4ನೇ ಅಡ್ಡರಸ್ತೆ, ಕಿರ್ಲೋಸ್ಕರ್ ಕಾಲೋನಿ, 3ನೇ ಹಂತ, ಬೆಂಗಳೂರು-79.

ಸಂಖ್ಯೆ: ವಾ-75/ವಾ.ಸ./ಸಭಾನಡವಳಿ-02/2022-23 ದಿನಾಂಕ:30/04/2022

-:ಸಭೆಯ ನಡವಳಿಗಳು:-

ಮಾನ್ಯ ನೋಡಲ್ ಅಧಿಕಾರಿಯವರ ಆದೇಶದಂತೆ, ದಿನಾಂಕ: 18/04/2022 ಸೋಮವಾರದಂದು ಬೆಳಿಗ್ಗೆ 10.30 ಘಂಟೆಗೆ ವಾರ್ಡ್-75 ಶಂಕರಮಠದ ವಾರ್ಡ್ ಮಟ್ಟದ ಸಮಿತಿ ಸಭೆಯನ್ನು ಆಯೋಜಿಸಲಾಯಿತು.

ಶ್ರೀ ಬೆನಕೇಶ್ ಆರ್. ವಾರ್ಡ್ ಸಮಿತಿಯ, ಕಾರ್ಯದರ್ಶಿಗಳು ರವರು ಸಭೆಯನ್ನು ನಡೆಸುತ್ತಾ, ಸಾರ್ವಜನಿಕರ ಕುಂದು ಕೊರತೆಗಳು ಹಾಗೂ ವಾರ್ಡ್ ಅಭಿವೃದ್ಧಿಗೆ ಸಂಭಂಧಿಸಿದಂತೆ ಹಾಗೂ ಕೋವಿಡ್-19 ವೈರಸ್‌ನ ಸೋಂಕಿನ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು, ಮೂಲಭೂತ ಸೌಕರ್ಯಗಳನ್ನು ಒದಗಿಸಲು ಹಾಗೂ ಸಾರ್ವಜನಿಕರ ಹಿತರಕ್ಷಣೆಗಾಗಿ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಬಗ್ಗೆ ಚರ್ಚಿಸಲು ಸಭೆಯಲ್ಲಿ ಉಪಸ್ಥಿತರಾಗಿರುವ ಮಾನ್ಯ ನೋಡಲ್ ಅಧಿಕಾರಿಯವರಿಗೆ ಮತ್ತು ಸಭೆಗೆ ಆಗಮಿಸಿರುವ ಎಲ್ಲಾ ಅಧಿಕಾರಿಗಳಿಗೆ ಶ್ರೀ ಬೆನಕೇಶ್ ಆರ್. ರವರು ಸಭೆಗೆ ಸ್ವಾಗತ ಕೋರುತ್ತಾ, ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ಸಭೆಯನ್ನು ಮುನ್ನಡೆಸಲಾಯಿತು.

**ಸಭೆಯಲ್ಲಿ ಹಾಜರಿದ್ದವರು:-**

| | |
|---|---|
| 1 | ಶ್ರೀ. ಎಲ್. ಸುರೇಶ್, ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು, ವಾರ್ಡ್-75, ಬಿಬಿಎಂಪಿ |
| 2 | ಶ್ರೀ ಬೆನಕೇಶ್ ಆರ್. ಸಮಿತಿ ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು, ವಾರ್ಡ್-75, ಬಿಬಿಎಂಪಿ |
| 3 | ಶ್ರೀಮತಿ ಡಾ. ಮಮತಾ ಕಿರಣ್, ವೈದ್ಯಕೀಯ ಅಧಿಕಾರಿ, ಆರೋಗ್ಯ ಇಲಾಖೆ, ವಾರ್ಡ್-75, ಬಿಬಿಎಂಪಿ |
| 4 | ಶ್ರೀ ಸುನೀಲ್ ಕುಮಾರ್, ಕಂದಾಯ ಪರಿವೀಕ್ಷಕರು, ವಾರ್ಡ್-75, ಶಂಕರಮಠ, ಬಿಬಿಎಂಪಿ. |
| 5 | ಶ್ರೀ ಎಸ್. ಲೋಕೇಶ್, ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್-75, ಬಿಬಿಎಂಪಿ. |
| 6 | ಶ್ರೀ ಕೆ.ಎಮ್. ಕುಮಾರಸ್ವಾಮಿ, ಸಹಾಯಕ ಅಭಿಯಂತರರು, ಬೃ.ನೀ.ಗಾ. ವಿಭಾಗ (ಪಶ್ಚಿಮ), ಬಿಬಿಎಂಪಿ. |
| 7 | ಶ್ರೀಮತಿ ಲತಾ ಟಿ.ಎಸ್. ಕಿರಿಯ ಅಭಿಯಂತರರು, ಎನ್-3 ಉಪವಿಭಾಗ, ಬೆಸ್ಕಾಂ |
| 8 | ಶ್ರೀ ಚನ್ನವೀರಯ್ಯ, ಹೆಡ್ ಗ್ಯಾಂಗ್‌ಮನ್, ಕಾಮಗಾರಿ ವಿಭಾಗ, ವಾರ್ಡ್-75, ಬಿಬಿಎಂಪಿ. |
| 9 | ಶ್ರೀ ಎನ್. ಮಂಜುನಾಥ್, ಮೇಸ್ತ್ರಿ, ತೋಟಗಾರಿಕೆ ವಿಭಾಗ, ಪಶ್ಚಿಮ, ಬಿಬಿಎಂಪಿ. |
| 10 | ಶ್ರೀ ಕೆಂಪಯ್ಯ, ಮೇಸ್ತ್ರಿ, ಘ.ತ್ಯಾ.ನಿ. ವಿಭಾಗ, ವಾರ್ಡ್-75, ಬಿಬಿಎಂಪಿ. |
| 11 | ಶ್ರೀ ಯೋಗೇಶ್ ಟಿ. ವಾರ್ಡ್ ಮಾರ್ಷಲ್, ವಾರ್ಡ್-75, ಬಿಬಿಎಂಪಿ. |
| 12 | ಶ್ರೀ ಬಸವರಾಜು ಬಿ ದೇಸಾಯಿ, ಪಿ.ಹೆಚ್.ಸಿ. ಬಸವೇಶ್ವರ ಪೊಲೀಸ್ ಠಾಣೆ. |
| 13 | ಶ್ರೀ ಶ್ರೀಶೈಲ್ ಪಾಟೀಲ್, ಪಿ.ಸಿ., ವಿಜಯನಗರ ಸಂಚಾರಿ ಪೊಲೀಸ್ ಠಾಣೆ. |
| 14 | ಶ್ರೀ ಪುಟ್ಟಸ್ವಾಮಿ, ಉದ್ಯಾನವನಗಳ ನಿರ್ವಹಣೆ ಗುತ್ತಿಗೆದಾರರು, ವಾರ್ಡ್-75, ಬಿಬಿಎಂಪಿ. |
| 15 | ಶ್ರೀ ಕೆ. ಮನೋಜ್, ಬೀದಿ ದೀಪಗಳ ನಿರ್ವಹಣೆ ಗುತ್ತಿಗೆದಾರರು, ವಾರ್ಡ್-75, ಬಿಬಿಎಂಪಿ. |
| 16 | ಶ್ರೀ ರವೀಶ್, ವಾರ್ಡ್‌ನ ನಾಗರೀಕರು, ವಾರ್ಡ್-75. |
| 17 | ಶ್ರೀ ವೇಣುಗೋಪಾಲ್ ಕೆ., ವಾರ್ಡ್‌ನ ನಾಗರೀಕರು, ವಾರ್ಡ್-75. |
| 18 | ಶ್ರೀ ಹನುಮಪ್ಪ, ವಾರ್ಡ್‌ನ ನಾಗರೀಕರು, ವಾರ್ಡ್-75. |
| 19 | ಶ್ರೀ ಕೆ.ವಿ.ಸುಬ್ಬಣ್ಣ, ವಾರ್ಡ್‌ನ ನಾಗರೀಕರು, ವಾರ್ಡ್-75. |
| 20 | ಶ್ರೀ ಎನ್.ವಿ. ಬಾಲಾಜಿ, ವಾರ್ಡ್‌ನ ನಾಗರೀಕರು, ವಾರ್ಡ್-75. |

ಮು.ತಿ.ನೋ.

Scanned by CamScanner

## ಸಭೆಯಲ್ಲಿ ಚರ್ಚಿಸಲಾದ ವಿಷಯಗಳು:-

1. ಆರೋಗ್ಯ ಇಲಾಖೆ ಮತ್ತು ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ:-
   - ಮಾನ್ಯ ನೋಡಲ್ ಅಧಿಕಾರಿಯವರು ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ ಮಾತನಾಡುತ್ತಾ, ವಾರ್ಡ್-75 ಶಂಕರಮಠದಲ್ಲಿ ಕೋವಿಡ್-19ಗೆ ಸಂಭಂಧಿಸಿದಂತೆ ಮಾಹಿತಿಗಳು ವಿವರಣೆ ನೀಡುವಂತೆ ಸಭೆಯಲ್ಲಿ ತಿಳಿಸಿದರು.
   - ಶ್ರೀಮತಿ ಡಾ. ಮಮತಾ ಕಿರಣ್, ವೈದ್ಯಕೀಯ ಅಧಿಕಾರಿ, ರವರು ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯಲ್ಲಿ ಹೊಸದಾಗಿ ಯಾವುದೇ ಕೋವಿಡ್-19 ಸೋಂಕಿತರು ಕಂಡುಬಂದಿರುವುದಿಲ್ಲ, ವಾರ್ಡ್ ವ್ಯಾಪ್ತಿಯಲ್ಲಿನ 13 ರಿಂದ 15ನೇ ವರ್ಷದ ಮಕ್ಕಳಿಗೆ ಲಸಿಕೆ ನೀಡುವ ಕಾರ್ಯವು ಜಾರಿಯಲ್ಲಿರುವುದಾಗಿ ತಿಳಿಸುತ್ತಾ, ಹೊಸದಾಗಿ ಪ್ರಾರಂಭವಾದ ಪ್ರಾಥಮಿಕ ಆರೋಗ್ಯ ಕೇಂದ್ರವಾದ್ದರಿಂದ ಹೆಚ್ಚಾಗಿ ಜನರಿಗೆ ಆರೋಗ್ಯ ಕೇಂದ್ರದ ಬಗ್ಗೆ ತಿಳಿಸಲು ಆರೋಗ್ಯ ಕೇಂದ್ರಕ್ಕೆ ಮಾರ್ಗಸೂಚಿ ಬೋರ್ಡ್ ಅನ್ನು ಅಳವಡಿಸಿಕೊಡುವಂತೆ ಸಭೆಯಲ್ಲಿ ಕೋರಿದರು.
   - ಮಾನ್ಯ ನೋಡಲ್ ಅಧಿಕಾರಿಯವರು ಮಾತನಾಡುತ್ತಾ, ಮಾರ್ಗಸೂಚಿ ಬೋರ್ಡ್ ಅಳವಡಿಸಲು ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಕ್ರಮವಹಿಸಬೇಕಾಗಿ ಸಭೆಯಲ್ಲಿ ತಿಳಿಸಿದರು.

2. ಅಭಿಯಂತರರ ವಿಭಾಗದ ಬಗ್ಗೆ:-
   - ಶ್ರೀ ರವೀಶ್, ವಾರ್ಡ್‌ನ ನಾಗರೀಕರು ಮಾತನಾಡುತ್ತಾ, ಲಕ್ಷ್ಮೀನಗರದ 5ನೇ ಅಡ್ಡರಸ್ತೆಯಲ್ಲಿ ಲಾವಣ್ಯ ಸ್ಟೋರ್ ಬಳಿಯಲ್ಲಿ ಮಳೆನೀರಿನಿಂದಾಗಿ ಎಂದಿನಂತೆ ತುಂಬಾ ತೊಂದರೆ ಉಂಟಾಗುವುದಾಗಿ ಸಭೆಯಲ್ಲಿ ದೂರಿದರು.
   - ಮಾನ್ಯ ನೋಡಲ್ ಅಧಿಕಾರಿಯವರು ಮಾತನಾಡುತ್ತಾ, ಲಕ್ಷ್ಮೀನಗರದ 5ನೇ ಅಡ್ಡರಸ್ತೆಯಲ್ಲಿ ಲಾವಣ್ಯ ಸ್ಟೋರ್ ಬಳಿಯಲ್ಲಿ ಚರಂಡಿಗಳಲ್ಲಿ ಹೂಳು ತೆಗೆಯುವ ಕೆಲಸವನ್ನು ಕೈಗೊಳ್ಳುವಂತೆ ಸಭೆಯಲ್ಲಿ ಸಹಾಯಕ ಅಭಿಯಂತರರಿಗೆ ತಿಳಿಸಿದರು.
   - ಶ್ರೀ ಆರ್. ಮಂಜುನಾಥ್, ವಾರ್ಡ್‌ನ ನಾಗರೀಕರು ಮಾತನಾಡುತ್ತಾ, ಕೆಂಪೇಗೌಡ ಆಟದ ಮೈದಾನಕ್ಕೆ ಗೇಟ್ ಅಳವಡಿಸಿಕೊಡಬೇಕಾಗಿ ಸಭೆಯಲ್ಲಿ ಕೋರಿದರು.
   - ಸಹಾಯಕ ಅಭಿಯಂತರರು ಮಾತನಾಡುತ್ತಾ, ಕೆಂಪೇಗೌಡ ಆಟದ ಮೈದಾನಕ್ಕೆ ಗೇಟ್ ಅಳವಡಿಸುವ ಕಾಮಗಾರಿಯನ್ನು ಅಂದಾಜುಪಟ್ಟಿಯಲ್ಲಿ ಸೇರಿಸಿಕೊಂಡಿದ್ದು ಅನುಮೋದನೆಗಾಗಿ ಸಲ್ಲಿಸಲಾಗಿರುವುದಾಗಿ ಸಭೆಯಲ್ಲಿ ತಿಳಿಸಿದರು.
   - ಶ್ರೀ ರವೀಶ್, ವಾರ್ಡ್‌ನ ನಾಗರೀಕರು ಮಾತನಾಡುತ್ತಾ, ಜೆ.ಸಿ.ನಗರದ 15ನೇ ಮುಖ್ಯರಸ್ತೆ ಮತ್ತು 17ನೇ ಮುಖ್ಯರಸ್ತೆಗಳಲ್ಲಿ ಜಿಯೋ ಮತ್ತು ಬೆಸ್ಕಾಂ ರವರು ಕೇಬಲ್ ಅಳವಡಿಸಲು ರಸ್ತೆಯನ್ನು ಅಗೆದು ಮುಚ್ಚಿರುತ್ತಾರೆ ಇದರಿಂದಾಗಿ ಗುಂಡಿಗಳು ಹೆಚ್ಚಾಗುತ್ತಿದ್ದು ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿರುವುದಾಗಿ ಸಭೆಯಲ್ಲಿ ದೂರಿದರು.
   - ಸಹಾಯಕ ಅಭಿಯಂತರರು ಮಾತನಾಡುತ್ತಾ, ಜೆ.ಸಿ.ನಗರದ 15ನೇ ಮುಖ್ಯರಸ್ತೆ ಮತ್ತು 17ನೇ ಮುಖ್ಯರಸ್ತೆಗಳಲ್ಲಿ ಉಂಟಾಗಿರುವ ರಸ್ತೆ ಗುಂಡಿಗಳಿಗೆ ವೆಟ್‌ಮಿಕ್ಸ್ ಹಾಕಲಾಗಿರುತ್ತದೆ ಮುಂದಿನ ದಿನಗಳಲ್ಲಿ ಪ್ಯಾಚ್ ವರ್ಕ್ ಅನ್ನು ಕೈಗೊಳ್ಳಲಾಗುವುದು ಎಂದು ಸಭೆಯಲ್ಲಿ ತಿಳಿಸಿದರು.

3. ವಿದ್ಯುತ್ ವಿಭಾಗದ ಬಗ್ಗೆ:-
   - ಶ್ರೀ ಶ್ರೀಶೈಲ್ ಪಾಟೀಲ್, ಪಿ.ಸಿ. ವಿಜಯನಗರ ಸಂಚಾರ ಪೋಲಿಸ್ ಠಾಣೆ, ರವರು ಮಾತನಾಡುತ್ತಾ, ಶಂಕರಮಠ ವೃತ್ತದಲ್ಲಿರುವ ಹೈಮಾಸ್ಟ್ ಅನ್ನು ಸರಿಪಡಿಸಿಕೊಡಬೇಕಾಗಿ ಸಭೆಯಲ್ಲಿ ಕೋರಿದರು.
   - ಮಾನ್ಯ ನೋಡಲ್ ಅಧಿಕಾರಿಯವರು ಮಾತನಾಡುತ್ತಾ, ದೂರುಗಳಿರುವ ಸ್ಥಳಗಳನ್ನು ಪರಿಶೀಲಿಸಿ ಶೀಘ್ರವಾಗಿ ಸೂಕ್ತ ಕ್ರಮ ಕೈಗೊಂಡು ಸರಿಪಡಿಸುವಂತೆ ಶ್ರೀ ಕೆ. ಮನೋಜ್, ಗುತ್ತಿಗೆದಾರರು ರವರಿಗೆ ಸಭೆಯಲ್ಲಿ ತಿಳಿಸಿದರು.

4. ಪಶುಪಾಲನೆ ವಿಭಾಗದ ಬಗ್ಗೆ:-
   - ಮಾನ್ಯ ನೋಡೆಲ್ ಅಧಿಕಾರಿರವರು ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯಲ್ಲಿ ಬೀದಿ ನಾಯಿಗಳು ಹೆಚ್ಚಾಗಿದ್ದು ಈ ಬಗ್ಗೆ ಸಾರ್ವಜನಿಕರಿಂದ ದೂರುಗಳು ಹೆಚ್ಚಾಗುತ್ತಿರುತ್ತವೆ, ಆದುದರಿಂದ ಬೀದಿ ನಾಯಿಗಳಿಗೆ ರೇಬಿಸ್ ವ್ಯಾಕ್ಸಿನೇಷನ್ ಅಳವಡಿಸಲು ಸೂಕ್ತ ಕ್ರಮವಹಿಸುವಂತೆ ಹಿರಿಯ ವೆಟರಿನರಿ ಪರಿವೀಕ್ಷಕರು ರವರಿಗೆ ತಿಳಿಸುವಂತೆ ಕಾರ್ಯದರ್ಶಿಗಳಿಗೆ ಸಭೆಯಲ್ಲಿ ತಿಳಿಸಿದರು.

ಮು.ತಿ.ನೋ.

Scanned by CamScanner

5. ಬೃ.ಮ.ನೀ.ಕಾ. ವಿಭಾಗದ ಬಗ್ಗೆ:-

- ಮಾನ್ಯ ನೋಡಲ್ ಅಧಿಕಾರಿಯವರು ಮಾತನಾಡುತ್ತಾ, ಕಳೆದ ಸಭೆಯ ಮುಕ್ತಾಯದ ನಂತರದಲ್ಲಿ ಕೈಗೊಂಡಿದ್ದ ವಾರ್ಡ್ ಪರಿವೀಕ್ಷಣೆಯ ಸಮಯದಲ್ಲಿ 19ನೇ ಮುಖ್ಯರಸ್ತೆಯಲ್ಲಿ ಹಾದುಹೋಗಿರುವ ಬೃ.ಮ.ನೀ. ಗಾಲುವೆಯ ಪಶ್ಚಿಮದ ಕಡೆಗಿನ ತಡೆಗೋಡೆಯು ಹರಿಯುವ ನೀರಿಗೆ ಅಡ್ಡವಾಗಿರುವುದರಿಂದ ಮಳೆ ನೀರು ರಸ್ತೆ ಬದಿಯ ಚರಂಡಿಗಳಲ್ಲಿ ನುಗ್ಗುವುದರಿಂದ ಸುತ್ತಮುತ್ತಲಿನ ಮನೆಗಳಿಗೆ ನೀರು ನುಗ್ಗುತ್ತಿರುತ್ತದೆ. ಮತ್ತು ಸದರಿ ಕಾಲುವೆಯಲ್ಲಿ ಹೂಳು ತೆಗೆಯುವ ಸಲುವಾಗಿ 20ನೇ ಮುಖ್ಯರಸ್ತೆಯಲ್ಲಿರುವ ಪೂರ್ವ ಭಾಗದ ತಡೆಗೋಡೆಯನ್ನು ಒಡೆದು ಹಾಕಿರುತ್ತಾರೆ ಹಾಗೂ ಶೇಖರಿಸಲಾದ ಡೆಬ್ರಿಸ್ ಅನ್ನು ತೆರವುಗೊಳಿಸದೇ ಹಾಗೇ ಕಾಲುವೆಯಲ್ಲಿಯೇ ಬಿಟ್ಟಿರುತ್ತಾರೆ ಇದರಿಂದಾಗಿ ನೀರು ಹರಿಯಲು ತೊಂದರೆಯಾಗುತ್ತಿರುವುದಾಗಿ ತಿಳಿಸುತ್ತಾ, ಸದರಿ ಸ್ಥಳಗಳಿಗೆ ಭೇಟಿ ನೀಡಿ ಸೂಕ್ತ ಕ್ರಮವಹಿಸಬೇಕಾಗಿ ಸಭೆಯಲ್ಲಿ ಹಾಜರಿದ್ದ ಶ್ರೀ ಕೆ. ಎಮ್. ಕುಮಾರಸ್ವಾಮಿ, ಸಹಾಯಕ ಅಭಿಯಂತರರು, ಬೃ.ಮ.ನೀ.ಕಾ. ವಿಭಾಗ, (ಪ) ರವರಿಗೆ ಸಭೆಯಲ್ಲಿ ತಿಳಿಸಿದರು.
- ಶ್ರೀ ಕೆ. ಎಮ್. ಕುಮಾರಸ್ವಾಮಿ, ಸಹಾಯಕ ಅಭಿಯಂತರರು, ಬೃ.ಮ.ನೀ.ಕಾ. ವಿಭಾಗ, (ಪ) ಮಾತನಾಡುತ್ತಾ, ಸ್ಥಳ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಸಭೆಯಲ್ಲಿ ತಿಳಿಸಿದರು.

6. ಕಂದಾಯ ವಿಭಾಗದ ಬಗ್ಗೆ:-

- ಮಾನ್ಯ ನೋಡಲ್ ಅಧಿಕಾರಿಯವರು ಮಾತನಾಡುತ್ತಾ, ಎಂದಿನಂತೆ ವಾರ್ಡ್ ವ್ಯಾಪ್ತಿಯಲ್ಲಿ ಸಂಗ್ರಹವಾದ ಕಂದಾಯದ ಮೊತ್ತ ಹಾಗೂ ಕಂದಾಯ ಸಂಗ್ರಹಣೆಗಾಗಿ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ವರದಿ ನೀಡುವಂತೆ ಕಂದಾಯ ಪರಿವೀಕ್ಷಕರು ವಾರ್ಡ್-75 ರವರಿಗೆ ತಿಳಿಸಿದರು.
- ಶ್ರೀ ಸಿದ್ಧರಾಮೇಶ್ವರ್ ಮತ್ತು ಶ್ರೀ ಸುನೀಲ್ ಕುಮಾರ್, ಕಂದಾಯ ಪರಿವೀಕ್ಷಕರು, ವಾರ್ಡ್-75 ರವರು ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯಲ್ಲಿ ಸರಿಯಾದ ರೀತಿಯಲ್ಲಿ ಕಂದಾಯ ಸಂಗ್ರಹಣೆಯಾಗುತ್ತಿದ್ದು, 2021-22ನೇ ಸಾಲಿನಲ್ಲಿ 01-ಏಪ್ರಿಲ್-2021 ರಿಂದ 31-ಮಾರ್ಚ್-2022ರ ವರೆಗೆ ಬಾಕಿ ಹಾಗೂ ಪ್ರಸ್ತುತ ಸಾಲಿನ ಒಟ್ಟು ಮೊತ್ತ ರೂ. 6.10 ಕೋಟಿಗಳಷ್ಟು ಕಂದಾಯ ಸಂಗ್ರಹವಾಗಿರುವುದಾಗಿ ತಿಳಿಸುತ್ತಾ, ನೂತನ ವರ್ಷದಲ್ಲಿ ಈವರೆವಿಗೆ ಇನ್ನೂ ಯಾವುದೇ ಕಂದಾಯ ಪಾವತಿ ಆಗಿರುವುದಿಲ್ಲ ಎಂದು ಸಭೆಯಲ್ಲಿ ತಿಳಿಸಿದರು.

7. ಅರಣ್ಯ ವಿಭಾಗದ ಬಗ್ಗೆ:-

- ಶ್ರೀಮತಿ ಸಂಧ್ಯಾ ಮಹೇಶ್, ಕಿರ್ಲೋಸ್ಕರ್ ಕಾಲೋನಿ ನಿವಾಸಿ, ರವರು ಮಾತನಾಡುತ್ತಾ, ಮನೆ ನಂ. ಎಸ್-83 ಎದುರಿನಲ್ಲಿರುವ ದೊಡ್ಡ ಮರವು ತುಂಬಾ ಬಾಗಿರುವುದರಿಂದ ಹಾಗೂ ವಿದ್ಯುತ್ ತಂತಿಗಳು ಜೊತೆಗಿರುವುದರಿಂದ ಅನಾಹುತಗಳು ಸಂಭವಿಸುವುದಾಗಿ ತಿಳಿಸಿ ಸದರಿ ಮರವನ್ನು ತೆರವುಗೊಳಿಸಿಕೊಡಬೇಕಾಗಿ ಕೋರಿ ಪತ್ರವೊಂದನ್ನು ಸಭೆಗೆ ಸಲ್ಲಿಸಿದರು.
- ಮಾನ್ಯ ನೋಡೆಲ್ ಅಧಿಕಾರಿರವರು ಮಾತನಾಡುತ್ತಾ, ಸದರಿ ದೂರಿನಂತೆ ಮರವನ್ನು ಪರಿಶೀಲಿಸಿ ತೆರವುಗೊಳಿಸಲು ಸೂಕ್ತ ಕ್ರಮವಹಿಸುವಂತೆ ಶ್ರೀ ಮಲ್ಲಪ್ಪ, ಮೇಸ್ತ್ರಿ, ಅರಣ್ಯ ಇಲಾಖೆ, ಬಿಬಿಎಂಪಿ ರವರಿಗೆ ತಿಳಿಸಲು ಕಾರ್ಯದರ್ಶಿ ರವರಿಗೆ ಸಭೆಯಲ್ಲಿ ತಿಳಿಸಿದರು.

8. ಘನತ್ಯಾಜ್ಯ ನಿರ್ವಹಣೆ ವಿಭಾಗದ ಬಗ್ಗೆ:-

- ಶ್ರೀ ರವೀಶ್ ಮತ್ತು ಶ್ರೀ ವೇಣುಗೋಪಾಲ್ ಕೆ. ವಾರ್ಡ್‌ನ ನಾಗರೀಕರು ರವರು ಮಾತನಾಡುತ್ತಾ, ಕಸ ವಿಲೇವಾರಿ ಆಟೋಗಳು ಸರಿಯಾಗಿ ಬರುತ್ತಿಲ್ಲ, ಕಸ ಸರಿಯಾಗಿ ವಿಲೇವಾರಿ ಆಗುತ್ತಿಲ್ಲ ಎಂದು ಸಭೆಯಲ್ಲಿ ದೂರಿದರು.
- ಮಾನ್ಯ ನೋಡೆಲ್ ಅಧಿಕಾರಿರವರು ಮಾತನಾಡುತ್ತಾ, ಕಸ ವಿಲೇವಾರಿಗೆ ಸಂಬಂಧಿಸಿದಂತೆ ಎಲ್ಲಾ ಅಧಿಕಾರಿಗಳು ಮತ್ತು ಕಸದ ಮೇಸ್ತ್ರಿಗಳು ಹಾಗೂ ಇತರೆ ಸಿಬ್ಬಂದಿಗಳ ಸಭೆ ಕರೆಯಲು ದಿನಾಂಕ ಗೊತ್ತುಪಡಿಸಲು ಕಾರ್ಯದರ್ಶಿಗಳಿಗೆ ಸಭೆಯಲ್ಲಿ ತಿಳಿಸಿದರು.

9. ತೋಟಗಾರಿಕೆ ವಿಭಾಗದ ಬಗ್ಗೆ:-

- ಶ್ರೀ ಕೆ. ವಿ. ಸುಬ್ಬಣ್ಣ, ವಾರ್ಡ್‌ನ ನಾಗರೀಕರು ರವರು ಮಾತನಾಡುತ್ತಾ, ಕೆಂಪೇಗೌಡ ಉದ್ಯಾನವನದಲ್ಲಿ ಕಸವನ್ನು ತೆರವುಗೊಳಿಸಿರುವುದಿಲ್ಲವೆಂದು ಸಭೆಯಲ್ಲಿ ದೂರಿದರು.
- ಮಾನ್ಯ ನೋಡೆಲ್ ಅಧಿಕಾರಿರವರು ಮಾತನಾಡುತ್ತಾ, ಸ್ಥಳ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ವಾರ್ಡ್‌ನ ಸಹಾಯಕ ಅಭಿಯಂತರರಿಗೆ ಸಭೆಯಲ್ಲಿ ತಿಳಿಸಿದರು.

ಮು.ತಿ.ನೋ.

Scanned by CamScanner

10. <u>ಬೆಸ್ಕಾಂ ವಿಭಾಗದ ಬಗ್ಗೆ:-</u>

- ಶ್ರೀಮತಿ ಲತಾ ಕೆ. ಕಿರಿಯ ಅಭಿಯಂತರರು, ಎನ್-3 ಉಪವಿಭಾಗ, ಬೆಸ್ಕಾಂ, ರವರು ಮಾತನಾಡುತ್ತಾ ವಾರ್ಡ್ ವ್ಯಾಪ್ತಿಯಲ್ಲಿ ಅಳವಡಿಸಲಾದ ಸಿಸಿ ಕ್ಯಾಮೆರಾಗಳಿಗೆ ಮತ್ತು ಕುಡಿಯುವ ನೀರಿನ ಘಟಕಗಳಿಗೆ ಬಿಬಿಎಂಪಿ ವತಿಯಿಂದ ವಿದ್ಯುತ್ ಮೀಟರ್ ಅಳವಡಿಸಿಕೊಳ್ಳಬೇಕಾಗಿ ಸಭೆಯಲ್ಲಿ ತಿಳಿಸಿದರು.
- ಮಾನ್ಯ ನೋಡೆಲ್ ಅಧಿಕಾರಿರವರು ಮಾತನಾಡುತ್ತಾ, ಸದರಿ ಸ್ಥಳಗಳನ್ನು ಪರಿಶೀಲಿಸಿ ಅಧಿಕಾರಿಗಳೊಂದಿಗೆ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ವಾರ್ಡ್‌ನ ಸಹಾಯಕ ಅಭಿಯಂತರರಿಗೆ ಸಭೆಯಲ್ಲಿ ತಿಳಿಸಿದರು.
- ವಾರ್ಡ್‌ನ ಸಹಾಯಕ ಅಭಿಯಂತರರು ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯಲ್ಲಿ ಎಲ್ಲಾ ಕುಡಿಯುವ ನೀರಿನ ಘಟಕಗಳಿಗೆ ವಿದ್ಯುತ್ ಮೀಟರ್ ಅಳವಡಿಸಲಾಗಿದ್ದು, ವಾರ್ಡ್ ಕಛೇರಿಯ ಎದುರುಗಡೆಯಿರುವ ಘಟಕಕ್ಕೆ ಮಾತ್ರ ಇನ್ನೂ ಅಳವಡಿಸಲಾಗಿರುವುದಿಲ್ಲ ಹಾಗೂ ಮುಂದಿನ ದಿನಗಳಲ್ಲಿ ಸಿಸಿ ಕ್ಯಾಮೆರಾಗಳಿಗೆ ವಿದ್ಯುತ್ ಮೀಟರ್ ತೆಗೆದುಕೊಳ್ಳುವ ವಿಷಯವಾಗಿ ಮೇಲಾಧಿಕಾರಿಗಳೊಂದಿಗೆ ಚರ್ಚಿಸಿ ಕ್ರಮವಹಿಸುವುದಾಗಿ ಸಭೆಯಲ್ಲಿ ತಿಳಿಸಿದರು.

11. <u>ಬಿ.ಡಬ್ಲ್ಯೂ.ಎಸ್.ಎಸ್.ಬಿ. ವಿಭಾಗದ ಬಗ್ಗೆ:-</u>

- ಶ್ರೀ ಆರ್. ಮಂಜುನಾಥ್. ವಾರ್ಡ್‌ನ ನಾಗರೀಕರು ರವರು ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯ ಇಂದಿರಾ ಕ್ಯಾಟೀನ್ ಬಳಿಯಲ್ಲಿ ಒಳಚರಂಡಿ ಬ್ಲಾಕ್ ಆಗಿರುತ್ತದೆ ಮತ್ತು ಒಳಚರಂಡಿ ಸೋರುವಿಕೆಯಿಂದಾಗಿ 15ನೇ ಮುಖ್ಯರಸ್ತೆ ರಾಗಿ ಮಿಲ್ ಹತ್ತಿರ, ಕುರುಬರಹಳ್ಳಿ ಮುಖ್ಯರಸ್ತೆಯ ಚೈತನ್ಯ ಮೆಡಿಕಲ್ ಹತ್ತಿರ ಮತ್ತು ಕರ್ನಾಟಕ ಬಡಾವಣೆಯ 1ನೇ ಮುಖ್ಯರಸ್ತೆ ಸೇಂಟ್ ಮೇರಿಸ್ ಶಾಲೆಯ ಹತ್ತಿರ ರಸ್ತೆ ಮೇಲ್ಭಾಗದ ಮಣ್ಣು ಕುಸಿದು ಗುಂಡಿಗಳಾಗಿ ಮಾರ್ಪಾಡಾಗುತ್ತಿರುವುದಾಗಿ ಸಭೆಯಲ್ಲಿ ದೂರಿದರು.
- ಮಾನ್ಯ ನೋಡೆಲ್ ಅಧಿಕಾರಿ ರವರು ಮಾತನಾಡುತ್ತಾ, ಸದರಿ ಸ್ಥಳಗಳನ್ನು ಪರಿಶೀಲಿಸಿ ಸೂಕ್ತ ಕ್ರಮವಹಿಸಬೇಕಾಗಿ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸುವಂತೆ ಕಾರ್ಯದರ್ಶಿಗಳಿಗೆ ಸಭೆಯಲ್ಲಿ ತಿಳಿಸಿದರು.

ಮುಂದುವರೆದು, ಪ್ರತೀ ಸಭೆಯ ಸಭಾ ನಡವಳಿಗಳನ್ನು ವಾರ್ಡ್‌ಗೆ ಸಂಬಂಧಿಸಿದ ಎಲ್ಲಾ ಇಲಾಖೆಗಳಿಗೆ ತಲುಪುವಂತೆ ಮಾಡಲು ಕಾರ್ಯದರ್ಶಿ ರವರಿಗೆ ಸೂಚಿಸಿದರು. ವಾರ್ಡ್‌ಗೆ ಸಂಬಂಧಿಸಿದ ಎಲ್ಲಾ ಇಲಾಖೆಗಳ ಅಧಿಕಾರಿಗಳು ಸಭಾ ನಡವಳಿಗಳಿಗೆ ಅನುಸಾರವಾಗಿ ತಮ್ಮ ಇಲಾಖೆಗೆ ಸಂಬಂಧಿಸಿದ ದೂರುಗಳನ್ನು ಪಟ್ಟಿ ಮಾಡಿಕೊಂಡು, ಸದರಿ ದೂರುಗಳನ್ನು ಸರಿಪಡಿಸಿರುವ ಬಗ್ಗೆ ಅಥವಾ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಟಿಪ್ಪಣಿಯೊಂದಿಗೆ ದಾಖಲಾತಿಗಳನ್ನು ದೃಢೀಕರಿಸಿ ಕಡತದಲ್ಲಿ ತಪ್ಪದೇ **ಪ್ರತೀ ವಾರ್ಡ್ ಸಮಿತಿ ಸಭೆಯಲ್ಲಿ** ವರದಿ ಮಾಡಲು ಹಾಗೂ **ವಾರ್ಡ್ ಕಮಿಟಿ ವಾರ್ಡ್-75 ವಾಟ್ಸ್ ಆಪ್ ಗ್ರೂಪ್** ನಲ್ಲಿ ವರದಿ ಮಾಡಲು ಸೂಚಿಸುತ್ತಾ, ಸಭೆಯನ್ನು ಮುಕ್ತಾಯ ಗೊಳಿಸಲಾಯಿತು. ಕೊನೆಯಲ್ಲಿ ಕಾರ್ಯದರ್ಶಿಗಳು ಸಭೆಗೆ ಆಗಮಿಸಿರುವ ಎಲ್ಲರಿಗೂ ವಂದಿಸಿದರು.

ನೋಡಲ್ ಅಧಿಕಾರಿರವರ ಅನುಮೋದನೆ ಮೇರೆಗೆ )

30/4/2022

**ಕಾರ್ಯದರ್ಶಿ**
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ: 75

<u>ಪ್ರತಿಯನ್ನು :-</u>

1. ಮಾನ್ಯ ವಲಯ ವಿಶೇಷ ಆಯುಕ್ತರು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿರವರಿಗೆ ಸಲ್ಲಿಸಿದೆ.
2. ಮಾನ್ಯ ಜಂಟಿ ಆಯುಕ್ತರು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿರವರಿಗೆ ಸಲ್ಲಿಸಿದೆ.
3. ಮಾನ್ಯ ಮುಖ್ಯ ಅಭಿಯಂತರರು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ತಾಂತ್ರಿಕ ಸಹಾಯಕರಿಗೆ ಸಲ್ಲಿಸಿದೆ.
4. ಮಾನ್ಯ ಆರೋಗ್ಯ ಅಧಿಕಾರಿಗಳು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
5. ಮಾನ್ಯ ಅಧೀಕ್ಷಕ ಅಭಿಯಂತರರು, (ಘನತ್ಯಾಜ್ಯ ನಿರ್ವಹಣೆ) ರವರ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ಆಪ್ತ ಸಹಾಯಕರವರಿಗೆ ಸಲ್ಲಿಸಿದೆ.
6. ಮಾನ್ಯ ಅರಣ್ಯಾಧಿಕಾರಿಗಳು, ಅರಣ್ಯ ವಿಭಾಗ ರವರಿಗೆ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ಆಪ್ತ ಸಹಾಯಕರವರಿಗೆ ಸಲ್ಲಿಸಿದೆ.
7. ಮಾನ್ಯ ಅಧೀಕ್ಷಕರು, ತೋಟಗಾರಿಕೆ ಇಲಾಖೆ ರವರ ಅವಗಾಹನೆಗೆ ತರಲು ಹಾಗೂ ಅಗತ್ಯ ಕ್ರಮಕ್ಕಾಗಿ ಸಹಾಯಕರಿಗೆ ಸಲ್ಲಿಸಿದೆ.
8. ವೈದ್ಯಕೀಯ ಆರೋಗ್ಯ ಅಧಿಕಾರಿಗಳು, (ಪಶ್ಚಿಮ ವಲಯ) ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
9. ಕಾರ್ಯಪಾಲಕ ಅಭಿಯಂತರರು, ಮಹಾಲಕ್ಷ್ಮೀಪುರಂ ವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
10. ಕಂದಾಯ ಅಧಿಕಾರಿಗಳು, ಮಹಾಲಕ್ಷ್ಮೀಪುರಂ ವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.

ಮು.ತಿ.ನೋ.

Scanned by CamScanner

11. ಸಹಾಯಕ ಕಾರ್ಯಪಾಲಕ ಅಭಿಯಂತರರು ನಾಗಪುರ ಉಪವಿಭಾಗ ರವರಿಗೆ ಸೂಕ್ತ ಕ್ರಮವಹಿಸಲು ಸಲ್ಲಿಸಿದೆ.
12. ಸಹಾಯಕ ಕಂದಾಯ ಅಧಿಕಾರಿಗಳು ನಾಗಪುರ ಉಪವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
13. ಸಹಾಯಕ ಕಾರ್ಯಪಾಲಕ ಅಭಿಯಂತರರು (ಪರಿಸರ ವಿಭಾಗ) ನಾಗಪುರ ಉಪವಿಭಾಗ ರವರ ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
14. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿದ್ಯುತ್ ವಿಭಾಗ ರವರಿಗೆ ಸೂಕ್ತ ಕ್ರಮ ವಹಿಸಲು ಸಲ್ಲಿಸಿದೆ.
15. ಎಲ್ಲಾ ಸಂಬಂಧಪಟ್ಟವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
16. ಕಛೇರಿಯ ಕಡತಕ್ಕೆ.

Scanned by CamScanner